# ದಿನಾಂಕ : 10.03.2021 ರಂದು ಬೆಳಿಗ್ಗೆ 9.30 ಗಂಟೆಗೆ ವಾರ್ಡ್-80 ರ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು

ವಾರ್ಡ್ ಸಂಖ್ಯೆ-80 ಹೊಯ್ಸಳನಗರ ವಾರ್ಡ್ ಕಛೇರಿಯಲ್ಲಿ ದಿನಾಂಕ 10-03-2021 ರಂದು ಬೆಳ್ಳಿಗ್ಗೆ 09.30 ಗಂಟೆಗೆ ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರು ನಿಯೋಜಿಸಿರುವ ವಾರ್ಡ್‌ನ ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ, ವಾರ್ಡ್ ಸಮಿತಿ ಸಭೆಯನ್ನು ಕರೆಯಲಾಗಿದ್ದು, ಈ ಕೆಳಕಂಡಂತೆ ಸದಸ್ಯರು ಸಭೆಯಲ್ಲಿ ಭಾಗವಹಿಸಿರುತ್ತಾರೆ.

**ಸಭೆಗೆ ಹಾಜರಿದ್ದ ಸದಸ್ಯರು ಹಾಗೂ ಅಧಿಕಾರಿಗಳು**

1. ಶ್ರೀ.ಎಂ.ಲೋಕೇಶ್ – ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು, ವಾರ್ಡ್-80
2. ಶ್ರೀ.ಲಿಂಗರಾಜೇಗೌಡ –ಸಹಾಯಕ ಅಭಿಯಂತರರು (ಸದಸ್ಯ ಕಾರ್ಯದರ್ಶಿ)
3. ಶ್ರೀ.ನವೀನ್ – ಕಿ.ಆ.ಪ
4. ಶ್ರೀ. ಗೌತಮ್ – ಸಹಾಯಕ ಅಭಿಯಂತರರು ಬೆಸ್ಕಾಂ
5. ಶ್ರೀ. ಗೋವಿಂದೇ ಗೌಡ – ತೋಟಗಾರಿಕೆ ಇಲಾಖೆ
6. ಶ್ರೀ. ಮಹದೇವ್ – ಕೆಲಸ ಪರಿವೀಕ್ಷಕ ಬಿ.ಡಬ್ಲ್ಯೂ.ಎಸ್.ಎಸ್. ಬಿ
7. ಶ್ರೀ. ಎಂ.ಫಂಜ ವಟನ್. – ಕೆಲಸ ಪರಿವೀಕ್ಷಕ ಬಿ.ಡಬ್ಲ್ಯೂ.ಎಸ್.ಎಸ್. ಬಿ
8. ಶ್ರೀ.ಅಶೋಕ ಶರತ್ – ಸದಸ್ಯರು
9. ಸ್ನೆಹಾ ನಂದಿಹಾಳ್ – ಸದಸ್ಯರು
10. ಶ್ರೀ. ಸತೀಶ್– ಮಾರ್ಷಲ್

ಪ್ರಥಮವಾಗಿ ವಾರ್ಡ್ ಕಾರ್ಯದರ್ಶಿಗಳು ಹಾಗೂ ಸಂಚಾಲಕರು ಆದ ಶ್ರೀ.ಸಿ.ಲಿಂಗರಾಜೇ ಗೌಡರವರು ಸಭೆಗೆ ಆಗಮಸಿದ್ದ ಎಲ್ಲಾ ಅಧಿಕಾರಿಗಳು, ಸದಸ್ಯರು ಮತ್ತು ಸಾರ್ವಜನಿಕರನ್ನು ಸಭೆಗೆ ಸ್ವಾಗತಿಸಿದರು. ಹಾಗೂ ಹಿಂದಿನ ಸಭೆಯ ನಡವಳಿಗಳನ್ನು ಸಭೆಗೆ ಓದಿ ತಿಳಿಸಿದರು ಹಾಗೂ ಇಂದಿನ ಸಭೆಯ ಅಜೆಂಡಾ ಹಾಗೂ ಸಾರ್ವಜನಿಕರ ಕುಂದುಕೊರತೆಗಳ ಬಗ್ಗೆ ಸಭೆಗೆ ಮಾಹಿತಿ ನೀಡುವಂತೆ ಕೋರಿದರು. ಹಾಗೂ ವಾರ್ಡ್ ಸಮತಿಗೆ ಆಯ್ಕೆ ಮಾಡಲಾಗಿರುವ ಸದಸ್ಯರುಗಳ ಪಟ್ಟಿಯನ್ನು ಸಭೆಗೆ ತಿಳಿಸಿದರು.

- ಹೆಚ್.ಎ.ಎಲ್ 2ನೇ ಹಂತಹ ರೆಸಿಡೆಂಟ್ ವೆಲ್ಫೆರ್ ಅಸೋಸಿಯೇಶನ್‌ನ ಶ್ರೀ.ನಾಯ್ದುರವರು ದೂರನ್ನು ತಿಳಿಸುತ್ತಾ, ವಾರ್ಡ್ ವ್ಯಾಪ್ತಿಯಲ್ಲಿನ ನಕ್ಷೆಗೆ ವ್ಯತಿರಿಕ್ತವಾಗಿರುವ ಹಾಗೂ ಕಾನೂನು ಬಾಹಿರವಾಗಿ ನಿರ್ಮಾಣವಾಗುತ್ತಿರುವ ಕಟ್ಟಡಗಳ ಪಟ್ಟಿಯನ್ನು ನೀಡಲು ಮತ್ತೊಮ್ಮೆ ಕೋರಿರುತ್ತಾರೆ. ಇದಕ್ಕೆ ಈಗಾಗಲೇ ಒಂದು ತಿಂಗಳಾಗಿದ್ದು ಮುಂದಿನ ವಾರ್ಡ್ ಸಮಿತಿ ಸಭೆಗೆ, ಸರ್ವೇ ಮಾಡಿ ಮಾಹಿತಿ ಒದಗಿಸುವಂತೆ ಸಹಾಯಕ ಅಭಿಯಂತರರಿಗೆ ತಿಳಿಸಲಾಯಿತು.
- ಶ್ರೀ. ನಾಯಡುರವರು ಮಾತನಾಡುತ್ತಾ, ವಾರ್ಡ್ 80ರ ವ್ಯಾಪ್ತಿಯ ಆಸ್ತಿ ಸಂಖ್ಯೆ 706, 7ನೇ ಮುಖ್ಯ ರಸ್ತೆ, ಹೆಚ್.ಎಲ್. 2ನೇ ಹಂತ, ವಸತಿ ಪ್ರದೇಶಗಳಲ್ಲಿ ವಾಣಿಜ್ಯ ಚಟುವಟಿಗೆಳನ್ನು ನಡೆಸುತ್ತಿದ್ದಾರೆಂದು ದೂರಿದ್ದಾರೆ. ಇದಕ್ಕೆ ಸಂಬಂಧಿಸಿದಂತೆ ದೂರಿನ ಬಗ್ಗೆ ಅಗತ್ಯ ಕ್ರಮ



Scanned with CamScanner

ಕೈಗೊಂಡು ಮುಂದಿನ ಸಭೆಗೆ ವರದಿ ಸಲ್ಲಿಸಲು ಆರೋಗ್ಯ ಅಧಿಕಾರಿಗಳು ಕ್ರಮ ವಹಿಸಲು ತಿಳಿಸಲಾಯಿತು.

- ನಂ. 229, 13ನೇ ಅಡ್ಡರಸ್ತೆ ಮತ್ತು ನಂ. 540, 5ನೇ ಮುಖ್ಯರಸ್ತೆ, 2ನೇ ಹಂತ ಇಂದಿರಾನಗರ, ಪಾದಚಾರಿ ರಸ್ತೆಗಳನ್ನು ಅಕ್ರಮಿಸಿಕೊಂಡು ಅತಿಕ್ರಮಣ ಮಾಡಿಕೊಂಡಿರುವ ಬಗ್ಗೆ ದೂರು ನೀಡಿರುತ್ತಾರೆ ಇದರ ಬಗ್ಗೆ ಸ್ಥಳ ಪರಿಶೀಲಿಸಿ ತೆರುವುಗೊಳಿಸಲು ಸಹಾಯಕ ಅಭಿಯಂತರರಿಗೆ ತಿಳಿಸಲಾಯಿತು.
- ನೇಹಾ ನಂದಿಹಾಳ್ ರವರು ಮಾತನಾಡಿ ವಾರ್ಡಿನಲ್ಲಿ ಅನಧಿಕೃತ ವಾಣಿಜ್ಯ ಮಳಿಗೆ ವಾಣಿಜ್ಯ ಪರವಾನಿಗೆ ನೀಡಿರುವುದಾಗಿ ದೂರಿರುತ್ತಾರೆ ಇದರ ಬಗ್ಗೆ ಸ್ಥಳ ಪರಿಶೀಲನೆಗಾಗಿ ದಿನಾಂಕ: 16.03.2021 ರಂದು ನಿಗಧಿ ಪಡಿಸಲಾಗಿದೆ ಇದಕ್ಕೆ ಸ್ಥಳ ಪರಿಶೀಲನೆಗೆ ಆರೋಗ್ಯ ಅಧಿಕಾರಿಗಳು, ಹಿರಿಯ ಆರೋಗ್ಯ ಪರಿವೀಕ್ಷಕರು, ಸಹಾಯಕ ಕಾರ್ಯಪಾಲಕ ಅಭಿಯಂತರರು, ಸಹಾಯಕ ಅಭಿಯಂತರು ಹಾಜರಿರಲು ತಿಳಿಸಲಾಯಿತು.
- ಶ್ರೀ.ಅಶೋಕ್ ಶರತ್ ಮತ್ತು ಸ್ನೇಹಾ ನಂದಿಯಾಳ್ ರವರು ಮಾತನಾಡಿ, ವಾರ್ಡ್‌ನಲ್ಲಿರುವ 25 ಪಬ್‌ಗಳಲ್ಲಿ 6 ರೂಫ್‌ಟಾಫ್‌ಗಳಿದ್ದು, ಇದರ ಅನುಮತಿಯ ಬಗೆಗಿನ ವಿವರಗಳನ್ನು ನೀಡಲು ಈಗಾಗಲೇ ಕೋರಿರುವ ಬಗ್ಗೆ ತಿಳಿಸಿದರು. ಆರೋಗ್ಯ ವೈದ್ಯಾಧಿಕಾರಿಗಳು, ಮುಂದಿನ ಸಭೆಗೆ ವಿವರಗಳನ್ನು ಒದಗಿಸಲು ತಿಳಿಸಲಾಯಿತು.
- ವಾರ್ಡಿನಲ್ಲಿ ಘನತ್ಯಾಜ್ಯ ವಿಭಾಗದವರು ಸ್ವಚ್ಚತೆ ಬಗ್ಗೆ ಸರಿಯಾದ ಸಮಯಕ್ಕೆ ಸ್ವಚ್ಚತೆ ನಿರ್ವಹಿಸುತ್ತಿಲ್ಲವೆಂದು ಸ್ನೇಹಾ ನಂದಿಹಾಳ್ ರವರು ದೂರಿದರು ಮತ್ತು ವಾರ್ಡಿನಲ್ಲಿ ಮರಗಳಿಂದ ಬೀಳುತ್ತಿರುವ ಎಲೆಗಳನ್ನು ವಿಲೇವಾರಿ ಮಾಡುತ್ತಿಲ್ಲ. ಈ ವಿಷಯದ ಬಗ್ಗೆ ಸರಿಯಾದ ಕ್ರಮ ತೆಗೆದು ಕೊಳ್ಳಲು ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ತಿಳಿಸಲಾಯಿತು.
- ಡಿಫೆನ್ಸ್ ಕಾಲೋನಿ 3ನೇ ಮುಖ್ಯರಸ್ತೆಯಲ್ಲಿರುವ ಪಾರ್ಕ್‌ನೊಳಗೆ ಬರುವ ಚರಂಡಿಯು ಕುಸಿದಿದ್ದು ಇದರ ಬಗ್ಗೆ ಶ್ರೀ.ಅಶೋಕ್ ಶರತ್‌ರವರು ದೂರು ನೀಡಿದ್ದು ಇದರ ಬಗ್ಗೆ ಸ್ಥಳ ಪರಿಶೀಲನೆ ಮಾಡಿ ಕ್ರಮ ಜರುಗಿಸಲು ಬೃಹತ್ ಮಳೆನೀರುಗಾಲುವೆ ಅಭಿಯಂತರರಿಗೆ ದೂರವಾಣಿ ಮೂಲಕ ತಿಳಿಸಲಾಯಿತು.
- ಇಂದಿರಾನಗರ 2ನೇ ಹಂತದಲ್ಲಿರುವ ಮರಪಾರ್ಕನಲ್ಲಿನ ಸಾರ್ವಜನಿಕರು ಸಮಯವನ್ನು ಹೆಚ್ಚು ಮಾಡಲು ಕೋರಲಾಯಿತು ಈ ಸಂಬಂಧ ಕೂಡಲೇ ಕ್ರಮ ವಹಿಸಲು ಸಭೆಯಲ್ಲಿ ಹಾಜರಿದ್ದ ತೋಟಗಾರಿಕೆ ಅಧಿಕಾರಿಯವರಿಗೆ ತಿಳಿಸಲಾಯಿತು.
- ಇಂದಿರಾನಗರ 2ನೇ ಹಂತದ 17 'ಸಿ' ಮತ್ತು 'ಡಿ' ರಸ್ತೆಯನ್ನು ಡಾಂಬರೀಕರಣ ಮಾಡಲು ಶ್ರೀ ಕುಲಕರ್ಣಿಯವರು ಕೋರಿದರು ಇದಕ್ಕೆ ಹಾಜರಿದ್ದ ಸಹಾಯಕ ಅಭಿಯಂತರರು ಒಂದು ತಿಂಗಳೊಗಾಗಿ ಡಾಂಬರೀಕರಣ ಮಾಡುವುದಾಗಿ ತಿಳಿಸಿದರು.
- ಇಂದಿರನಗರ 1ನೇ ಹಂತದಲ್ಲಿರುವ ವಿಕ್ಟರಿ ಆಟದ ಮೈದಾದಲ್ಲಿರುವ ಕಲ್ಲು ಮಣ್ಣು ಮತ್ತು ಡೆಬರೀಸ್ ತೆರವು ಗೊಳಿಸಲು ಸ್ನೇಹಾ ನಂದಿಹಾಳ್ ರವರು ಕೋರಿದರು. ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು ಕೂಡಲೇ ತೆರವು ಗೊಳಿಸುವುದಾಗಿ ತಿಳಿಸಿದರು.
- ವಾರ್ಡಿನಲ್ಲಿ ಪಾದ ಚಾರಿ ಮಾರ್ಗಗಳಲ್ಲಿ ಆರ್.ಎಮ್.ಯು ಅಳವಡಿಸಲು ಅಗೆದಿರುವ ಮಣ್ಣನ್ನು ತೆರವುಗೊಳಿಸದೆ ಹಾಗೂ ಪುರ್ನಸ್ಥಾಪನೆ ಮಾಡದೆ ಇರುವ ಬಗ್ಗೆ ಸ್ನೇಹಾ



Scanned with CamScanner

ನಂದಿಹಾಳ್ ರವರು ದೂರಿದರು. ಇದರ ಬಗ್ಗೆ ಕ್ರಮ ಕೈಗೊಂಡು ಮುಂದಿನ ಸಭೆಗೆ ವರದಿ ಏಡಲು ಬೆಸ್‌ಕಾಂ ಅಧಿಕಾರಿಗಳಿಗೆ ತಿಳಿಸಲಾಯಿತು.

- ವಾರ್ಡಿನಲ್ಲಿ ಎಲ್ಲಾ ಚರಂಡಿಗಳಲ್ಲಿ ಮಣ್ಣು ತುಂಬಿದ್ದು ನೀರು ಸರಾಗವಾಗಿ ಹರಿಯದೆ ರಸ್ತೆಯಲ್ಲಿ ಹರಿದು ರಸ್ತೆಗಳು ಹಾಳಾಗುತ್ತಿವೆ ಅದುದ್ದರಿಂದ ಎಲ್ಲಾ ಚರಂಡಿಗಳಲ್ಲಿ ಮಣ್ಣು ತೆಗೆಯಲು ಸ್ನೇಹಾ ನಂದಿಹಾಳ್ ರವರು ಕೋರಿದರು. ಈ ವಿಷಯದ ಬಗ್ಗೆ ಕ್ರಮ ಕೈಗೊಳ್ಳುವುದಾಗಿ ಸಹಾಯಕ ಅಭಿಯಂತರರಿಗೆ ತಿಳಿಸಲಾಯಿತು.
- ಇಂದಿರಾನಗರ 1ನೇ ಹಂತದ 10ನೇ ಅಡ್ಡರಸ್ತೆಯಲ್ಲಿ ಒಳಚರಂಡಿ ವ್ಯವಸ್ಥೆಯು ತುಂಬಾ ಹಳೆಯದಾಗಿದ್ದು ಹಾಗೂ ಚಿಕ್ಕದಾಗಿದ್ದು ಪದೆ ಪದೆ ಚರಂಡಿಯು ಕಟ್ಟಿಕೊಳ್ಳುತ್ತಿದ್ದು ನಿವಾಸಿಗಳಿಗೆ ತೊಂದರೆ ಅಗ್ಗಿದ್ದು ಒಳಚರಂಡಿಯ ಪೈಪ್‌ಗಳನ್ನು ಬದಲಾಯಿಸಲು ಕೋರಿದರು ಮತ್ತು ಎರಡು ಬಧಿಯ ಚರಂಡಿಗಳಲ್ಲಿ ಮಣ್ಣು ತುಂಬಿದ್ದು ಹಾಗೂ ರಸ್ತೆಗೆ ಡಾಂಬರೀಕರಣ ಮಾಡಲು ಕೊರಿದರು. ಇದಕ್ಕೆ ಸ್ಥಳ ಪರಿಶೀಲಿಸಿ ಅಗತ್ಯ ಕ್ರಮ ವಹಿಸಲು ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆಯ ಮತ್ತು ಪಾಲಿಕೆ ಅಧಿಕಾರಿಗಳಿಗೆ ತಿಳಿಸಲಾಯಿತು.

ಮೇಲ್ಕಂಡಂತೆ ತಿಳಿಸಲಾಗಿರುವ ಕುಂದುಕೊರತೆಗಳ ಬಗ್ಗೆ ಸಂಬಂಧಪಟ್ಟ ಆಯಾ ಇಲಾಖೆಯ ಅಧಿಕಾರಿಗಳಿಗೆ ಕ್ರಮವಹಿಸಲು ಹಾಗೂ ಸಮಿತಿಯ ಸದಸ್ಯರು ಕೋರಿರುವ ವಿವರಗಳನ್ನು ಮುಂದಿನ ವಾರ್ಡ್ ಸಮಿತಿಯ ಸಭೆಗೆ ಒದಗಿಸುವಂತೆ ಸೂಚಿಸುತ್ತಾ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

10/3/21

**ಕಾರ್ಯದರ್ಶಿಗಳು**
**ವಾರ್ಡ್ ಸಮಿತಿ–80**

**ಅಧ್ಯಕ್ಷರು**
**ವಾರ್ಡ್ ಸಮಿತಿ, ವಾರ್ಡ್ 80**
**ಹಾಗೂ ನೋಡಲ್ ಅಧಿಕಾರಿಗಳು,**
**ವಾರ್ಡ್ 80**

Scanned with CamScanner